ಆ ವಿಷಯದಲ್ಲೂ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಸಮುದ್ರದ ಬದಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಮಿನುಗಾರರು ಮನೆಗಳನ್ನು ಕಟ್ಟಲು ಬೇಕಾದ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಇಲಾಖೆಯವರು ಹೇಳುತ್ತಾರೆ, ಸಮುದ್ರದ ಬದಿಯಲ್ಲಿ ಕಟ್ಟಿದ ಮನೆಗಳು ಸಮುದ್ರದ ಕೊರೆತದಿಂದ ಮುಳುಗಿ ಹೋಗುವುದರಿಂದ ಅಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಸಮುದ್ರದ ಬದಿಯಲ್ಲಿ ಮೀನುಗಾರರು ಮನೆ ಕಟ್ಟುವುದಾದರೆ ಅವರಿಗೆ ಸೌಲಭ್ಯ ಒದಗಿಸಿಕೊಡಬೇಕು.

ಶ್ರೀ ಎ.ಎಂ. ಬೆಳ್ಳಿಯಪ್ಪ : ಇದು 1988 ರಲ್ಲಿ ಶುರುವಾದ ಸ್ಕೀಂ. ಈ ಸ್ಕೀಮಿಗೆ ಸೆಂಟ್ರಲ್ ಗವರ್ನಮೆಂಟ್‌ನಿಂದ ಏನ ಡೈರೆಕ್ಷನ್ ಸಿಕ್ಕಿತ್ತು ಎಂದರೆ ಒಂದೇ ಸ್ಥಳದಲ್ಲಿ ನೂರು ಮನೆಗಳನ್ನು ತೆಗೆದುಕೊಳ್ಳಬೇಕು ಎಂದು. ಈಗ ಅದು ಬದಲಾವಣೆಯಾಗಿ 10-20 ಮನೆಗಳನ್ನು ಕಟ್ಟಬಹುದೆಂದು ಬಂದಿದೆ. 1988 ರೂಲ್ ರಿಲ್ಯಾಕ್ಸ್ ಆಗಿ 10 ಮನೆಗಳ ಮೇಲೆ ಕಟ್ಟಬಹುದೆಂದು ಬಂದಿದೆ.

ತೋಟದ ಬೆಳೆಗಾರರ ಸಹಕಾರ ಮಾರಾಟ ಸಂಘಗಳ ನಿವ್ವಳ ಆದಾಯ

455 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಸನ್ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನಲ್ಲಿರುವ ತೋಟದ ಬೆಳೆಗಾರರ ಸಹಕಾರ ಮಾರಾಟ ಸಂಘದ (ಲಾಲ್‌ಬಾಗ್) 1990-91ನೇ ಸಾಲಿನ ನಿವ್ವಳ ಆದಾಯವೆಷ್ಟು?

ಆ) 1991-92ನೇ ಸಾಲಿನಲ್ಲಿ ಆಗಬಹುದಾದ ಅಂದಾಜು ನಷ್ಟವೆಷ್ಟು?

ಇ) 1991-92 ನೇ ಸಾಲಿನಲ್ಲಿ ಬಹಿರಂಗ ಮಾರುಕಟ್ಟೆಯಲ್ಲಿ ಈವರೆವಿಗೂ ಕೊಂಡು ಕೊಳ್ಳಲಾದ ಹಣ್ಣು, ತರಕಾರಿಗಳ ಪ್ರಮಾಣವೆಷ್ಟು? (ವಿವರ ನೀಡುವುದು)

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) 8.77 ಲಕ್ಷರೂಪಾಯಿಗಳು.

ಆ) ನಷ್ಟ ಆಗುವ ಸಂಭವವಿಲ್ಲ.

ಇ) ಹಣ್ಣುಗಳು - 7,38,801 ಕೆ.ಜಿ.ಗಳು.
ತರಕಾರಿಗಳು 19,40,266ಕೆ.ಜಿ.ಗಳು
(ಜನವರಿ ಮಾಹೆ ಅಂತ್ಯದವರೆಗೆ)

ಶ್ರೀ ಸಿ.ಎಂ. ಲಿಂಗಪ್ಪ : ಇಲ್ಲಿ ನೀಡಿರತಕ್ಕ ಉತ್ತರವನ್ನು ನೋಡಿದರೆ ವಸ್ತು ಸ್ಥಿತಿಯನ್ನು ಮರೆಮಾಚಿ ಸದನಕ್ಕೆ ಆತೃಪ್ತಿಯಾಗುವ ರೀತಿಯಲ್ಲಿ ಉತ್ತರ ಕಳುಹಿಸಿದಂತೆ ಕಾಣುತ್ತದೆ. ಮಾನ್ಯ ಮಂತ್ರಿಯವರು ಇದರ ಬಗ್ಗೆ ಕೊಂಚ ಗಮನ ಹರಿಸಿದ್ದರೆ ಪರಿಸ್ಥಿತಿ ಏನೆಂದು ಅರ್ಥವಾಗುತ್ತಿತ್ತು. 1991ರ ಆಗಸ್ಟ್‌ನಲ್ಲಿ ಪ್ರಾರಂಭವಾಗಿ 16-17 ಲಕ್ಷ ರೂಪಾಯಿಗಳು ನಷ್ಟವಾಗಿರುವ ಸಹಕಾರ ಸಂಘದಲ್ಲಿ ನಷ್ಟವಾಗುವ ಸಂಭವ ಇಲ್ಲವೆಂದು ಹೇಳುತ್ತಿದ್ದಾರೆ. ಅವರು ತಾತ್ಕಾಲಿಕವಾಗಿ ಪ್ರತಿ ತಿಂಗಳು ಮಾಡತಕ್ಕ ಸ್ಟೇಟ್‌ಮೆಂಟ್‌ನಲ್ಲಿ ಲಾಭ ನಷ್ಟ ಎಷ್ಟು ಎಂದು ತಿಳಿಸಬಹುದಿತ್ತು. ಅದನ್ನು ಹಾಕಿಲ್ಲವೆಂದು ಹೇಳುತ್ತಾರೆ. ಈಗ ಅಲ್ಲಿ ಏನೇನು ಆಗಬಾರದು ಅದೆಲ್ಲ ನಡೆಯುತ್ತಿದೆ. ಅಲ್ಲಿನ ಮ್ಯಾನೇಜರನ್ನು ಈಗ್ಗೆ ಒಂದೂವರೆ ತಿಂಗಳ ಹಿಂದೆಯೇ ಮನೆಗೆ ಕಳುಹಿಸಿ ಕಛೇರಿಗೆ ಬೀಗ ಹಾಕಿದ್ದಾರೆ. 4 ವ್ಯಾನ್‌ಗಳಿಗೆ ಹಣ ಕೊಟ್ಟಿದ್ದರೂ 3 ವ್ಯಾನ್‌ಗಳು ಮಾತ್ರ

ಓಡಾಡುತ್ತಿವೆ. ಇನ್ನೊಂದು ವ್ಯಾನ್ ಇಲ್ಲ. ಒಂದು ಕಟ್ಟಡ ಕಟ್ಟಬೇಕಾದರೆ ಶೇಕಡ 40 ರಷ್ಟು ಹೆಚ್ಚುವರಿ ಎಸ್.ಆರ್. ರೇಟನ್ನು ಕೊಟ್ಟು ಯಾರೋ ಕಂಟ್ರಾಕ್ಟರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆ ಮಾಡುತ್ತಿದ್ದಾರೆ. ನಮ್ಮ ಸಹಕಾರ ಸಂಘದಲ್ಲಿ ಹಣ್ಣು ತರಕಾರಿಗಳನ್ನು ನಮ್ಮದಿಯಾಗಿ ಮಾರಾಟ ಮಾಡಬಹುದೆಂದು ರೈತರು ಏನು ನಂಬಿದ್ದರು, ಆ ನೆಮ್ಮದಿ ಸಂಪೂರ್ಣವಾಗಿ ಮಾಯವಾಗಿ ದಳ್ಳಾಳಿಗಳು ಸೇರಿಕೊಂಡು ಹೋಲ್ ಸೇಲ್ ಮಾರುಕಟ್ಟೆಯಲ್ಲಿ ತರಕಾರಿಗಳನ್ನು ತೆಗೆದುಕೊಂಡು ಬಂದು ಈ ಸಹಕಾರ ಸಂಘಕ್ಕೆ ಕೊಡತಕ್ಕ ಪರಿಸ್ಥಿತಿ ಉಂಟಾಗಿದೆ. ತಾವು ನಷ್ಟವಾಗುವ ಸಂಭವ ಇಲ್ಲವೆಂದು ಹೇಳುತ್ತಿದ್ದೀರಿ. ಆದ್ದರಿಂದ ನಾನು ತಮ್ಮಲ್ಲಿ ಪ್ರಾರ್ಥಿಸುವುದು ಏನೆಂದರೆ ನಾನು ಬೇಕಾದರೆ ಎರಡು ತಿಂಗಳು ಕಾಯುತ್ತೇನೆ. ತಾವು ನಿಖರವಾದ ಉತ್ತರ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಸದನದ ಉಪಸಮಿತಿಯನ್ನು ನೇಮಿಸಿ ಇದರ ಬಗ್ಗೆ ವಿವರವಾಗಿ ತನಿಖೆ ಮಾಡಿಸಿ. ನಾನು ಮಾಡಿರತಕ್ಕ ಆಪಾದನೆ ಸುಳ್ಳಾದರೆ ಸದನ ಕೊಡತಕ್ಕ ತನಿಖೆ ಮಾಡಿಸಿ, ನಾನು ಮಾಡಿರತಕ್ಕ ಆಪಾದನೆ ಸುಳ್ಳಾದರೆ ಸದನ ಕೊಡತಕ್ಕ ಶಿಕ್ಷೆಗೆ ಗುರಿಯಾಗುತ್ತೇನೆ. ಇಲ್ಲದಿದ್ದರೆ ಮಾನ್ಯ ಸಚವರು ಈ ಜವಾಬ್ದಾರಿಗೆ ಗುರಿಯಾಗಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಸದಸ್ಯರಿಗೆ ಎರಡು ತಿಂಗಳು ಅವಕಾಶ ಕೊಟ್ಟು ಪುನಃ ಪ್ರಶ್ನೆ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ : ನಾನು ಬೆಳಿಗಾರ ಸದಸ್ಯ ಕೂಡ ಹೌದು. ಆ ಸಹಕಾರ ಸಂಘ ಬೆಳೆಯಬೇಕಾದರೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಲಿಂಗಪ್ಪನವರು ಅಭಿಪ್ರಾಯ ವ್ಯಕ್ತಪಡಿಸಿದ ಹಾಗೆ ಸದನವನ್ನು ತಪ್ಪು ದಾರಿಗೆ ಎಳೆಯಬೇಕೆಂಬ ಭಾವನೆ ಇಲ್ಲ. ಈ ಸಹಕಾರ ಸಂಘದಲ್ಲಿ ಕಳೆದ ಹತ್ತು ತಿಂಗಳಲ್ಲಿ ಸುಮಾರು 13.77 ಕೋಟಿ ರೂಪಾಯಿಗಳ ವ್ಯಾಪಾರ ವಹಿವಾಟು ನಡೆದಿದೆ. ಒಟ್ಟಾರೆ ಲಾಭ 1.6ಕೋಟಿ ರೂಪಾಯಿ ಬಂದಿದೆ. ಖರ್ಚು ಹೋಗಿ ಹತ್ತು ಲಕ್ಷ ರೂಪಾಯಿ ನಿವ್ವಳ ಲಾಭ ಬಂದಿದೆ. ಅಂಕಿ ಅಂಶಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡತ್ತೇನೆ. ಅವರು ಹೇಳಿದ ಹಾಗೆ, ಮ್ಯಾನೇಜರ್ ಮತ್ತು ಅಲ್ಲಿರತಕ್ಕ ನೌಕರರಿಗೆ ಸಾಮರಸ್ಯ ಇಲ್ಲದ ಕಾರಣ ಮ್ಯಾನೇಜರ್ ಅವರನ್ನು ಜವಾಬ್ದಾರಿಯಿಂದ ವಿಮುಕ್ತಿಗೊಳಿಸಿ ಬೇರೆ ಮ್ಯಾನೇಜರನ್ನು ಹಾಕುತ್ತಿದ್ದೇವೆ. ಅದೇ ರೀತಿ, ಅವರು ಅವರ ಅನಿಸಿಕೆಗಳನ್ನು ಅಂದರೆ ಸೊಸೈಟಿ ಸರಿಯಾಗಿ ನಡೆಯುತ್ತಿಲ್ಲ, ವಿಚಾರಣೆ ಆಗಬೇಕೆಂದು ಹೇಳುತ್ತಿದ್ದಾರೆ. ಅವರ ಹತ್ತಿರ ಏನೆಲ್ಲ ಮಾಹಿತಿ ಇದೆ ಅದನ್ನು ಕೊಟ್ಟರೆ ತನಿಖೆ ನಡೆಸಿ ತನಿಖಾ ವರದಿ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಡಿಸಿದ ಹಾಗೆ ನಾನು ಎರಡು ತಿಂಗಳು ಕಾಯುತ್ತೇನೆ.

ಅಧ್ಯಕ್ಷರು : ಎರಡನೇ ಪ್ರಶ್ನೆಯನ್ನು ಕೇಳಿ.

ಶ್ರೀ ಸಿ. ಬೈರೇಗೌಡ : ಅವರು ಎರಡು ತಿಂಗಳು ಕಾಯುವುದಕ್ಕೆ ತಯಾರಾಗಿದ್ದಾರಂತೆ ಆದರೆ ಎರಡು ತಿಂಗಳೊಳಗೆ ಅದು ಮುಳುಗೇ ಹೋಗುತ್ತದೆ. ಸ್ವಾಮಿ, ಈಗಾಗಲೇ ತಮಗೆ ವಿವರವಾಗಿ ಅಲ್ಲಿ ನಡೆಯತಕ್ಕ ಅವ್ಯವಹಾರಗಳ ಬಗ್ಗೆ ದೂರನ್ನು ಕೊಟ್ಟಿದ್ದಾರೆ. ಆ ದೂರಿನಲ್ಲಿ ಅಂಕಿಅಂಶಗಳು ಸ್ಪಷ್ಟವಾಗಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ.ಎಸ್. ಆತ್ಮಾನಂದ : ಅಲ್ಲಿನ ನೌಕರರು ಮನವಿ ಅರ್ಪಿಸುವುದಕ್ಕೆ ಬಂದು ಭೇಟಿಯಾಗಿ ಸೊಸೈಟಿಯಲ್ಲಿ ಈ ತರಹ ನಡೆಯುತ್ತಿದೆ ಎಂದು ಹೇಳಿದ್ದಾರೆ. ಲಿಖಿತ ರೂಪದಲ್ಲಿ ಕೊಡಿ ಎಂದು ನಾನೇ ಹೇಳಿದೆ. ಅವರು ಲಿಖಿತ ರೂಪದಲ್ಲಿ ಕೊಟ್ಟಾದ ಮೇಲೆ ತೋಟಗಾರಿಕೆ ಇಲಾಖೆಯ ನಿರ್ದೇಶಕರ ಮತಿಯಿಂದ ನಾನು ವಿಚಾರಣೆ ಮಾಡಿಸುತ್ತಿದ್ದೇನೆ. ಆ ವಿಚಾರಣಾ ವರದಿ ಬಂದತಕ್ಷಣ ಅದರ ಆಧಾರದ ಮೇಲೆ ನಾನು ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಹೆಚ್. ಎಂ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಸೊಸೈಟಿ ಆದ ಉದ್ದೇಶವೇನಂದರೆ, ರೈತರಿಗೂ ಗ್ರಾಹಕರಿಗೂ ಮಧ್ಯೆ ಬೆಲೆಯಲ್ಲಿ ಜಾಸ್ತಿ ವ್ಯತ್ಯಾಸ ಇರಬಾರದು, ರೈತರಿಗೆ ಸರಿಯಾದ ಬೆಲೆ ಸಿಗಬೇಕು ಎನ್ನುವ ಉದ್ದೇಶದಿಂದ ಆಗಿತ್ತು. ಇವತ್ತಿನ ದಿವಸ ತರಕಾರಿಗಳನ್ನು ರೈತರಿಂದಲೇ ಪರ್ಚೇಸ್ ಮಾಡುತ್ತಿಲ್ಲ. ಹೋಲ್ ಸೇಲ್ ಮಾರ್ಕೆಟ್‌ನಲ್ಲಿ ತಂಗು ಮಾರುತ್ತಾ ಇರುವುದು ನಿಜವೇ? ಲಿಖಿತವಾಗಿ ಕಂಪ್ಲೇಂಟ್ ಕೂಡ ಕೊಟ್ಟಿದೆ. ಸಚಿವರು ಅದರ ಬಗ್ಗೆ ಸರಿಯಾದ ಉತ್ತರ ಕೊಡಲಿಲ್ಲ. ಕಳೆದ ಸಾರಿಯ ಲಾಭಕ್ಕೂ ಈ ಸಾರಿಯ ಲಾಭಕ್ಕೂ ಲೆಕ್ಕ ಹಾಕಿದಾಗ ನಿವ್ವಳ ಲಾಭದಲ್ಲಿ ಕೊರತೆಯಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಬೆಂಗಳೂರು ಕೇಂದ್ರಕ್ಕೆ ಸುತ್ತಮುತ್ತ ಎಲ್ಲಾ ಹಳ್ಳಿಗಳಿಂದ ತರಕಾರಿಗಳು ಬರುತ್ತಿವೆ. ತರಕಾರಿ ಪರ್ಚೇಸ್ ಮಾಡುವುದಕ್ಕೂ ತೊಂದರೆಯಾಗುತ್ತಿದೆ. ಇದರ ಬಗ್ಗೆ ಸಚಿವರು ಏನು ಹೇಳುತ್ತಾರೆ ಎಂದು ಕೇಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಬೆಂಗಳೂರಿಗೆ ಬರತಕ್ಕ ತರಕಾರಿಯಲ್ಲಿ ಒಟ್ಟಾರೆ ಹತ್ತು ಪರ್ಸೆಂಟ್‌ನ್ನು ಸೊಸೈಟಿಯಲ್ಲಿ ತೆಗೆದುಕೊಂಡು ಗ್ರಾಹಕರಿಗೆ ವಿತರಣೆ ಮಾಡತಕ್ಕ ಶಕ್ತಿ ಇದೆ. ಈ ವರ್ಷ 1990-91ನೇ ಇಸವಿಯಲ್ಲಿ ರೈತರಿಂದ ಸುಮಾರು 18,351 ಟನ್ ಹಣ್ಣನ್ನು ಕೊಂಡಿತ್ತು. ಅದೇರೀತಿ 14.166.18 ಟನ್‌ಗಳಷ್ಟು ತರಕಾರಿಗಳನ್ನು ಕೊಂಡಿತ್ತು. 1991 -92ರದ್ದು ಕೂಡ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಸಹಕಾರ ಸಂಘ ಚೆನ್ನಾಗಿ ನಡೆಯುತ್ತಿದ್ದ ಕಾಲದ ಅಂಕಿಅಂಶಗಳನ್ನು ಓದುತ್ತಿದ್ದೀರಿ. ಇವತ್ತಿನ ದಿವಸ ಕಣ್ಣಿನಲ್ಲಿ ನೀರು ಬರುತ್ತಿದೆ. ತೋಟದಲ್ಲಿ ಟೊಮಾಟೊ ಬೆಲೆ 30 ರಿಂದ 40 ಪೈಸೆ ರೈತರಿಗೆ ಸಿಗುತ್ತಿದೆ. ಇವತ್ತು ರೈತರ ಸಹಕಾರ ಸಂಘ ಹಾಳಾಗಿ ಹೋಗಿದೆ. ಶ್ರೀಮತಿ ಮೋಟಮ್ಮನವರಿಗೆ ನನ್ನ ಕ್ಷೇತ್ರದಲ್ಲಿ ತೋರಿಸಿದೆ. ಟೊಮ್ಯಾಟೋ ಬೆಳೆದು ರೈತ ತೆಗೆದುಕೊಂಡು ಹೋಗಿ ಚರಂಡಿಗೆ ಹಾಕಿ ದೊಡ್ಡ ರಾಶಿಯಾಗಿದೆ.

ನನ್ನ ಕ್ಷೇತ್ರದಲ್ಲಿ ಅರ್ಧ ಲಾರಿ ಲೋಡ್‌ನಷ್ಟು ಟೊಮಾಟೊ ಚರಂಡಿಗೆ ಹಾಕಿರುವುದನ್ನು ಶ್ರೀಮತಿ ಮೋಟಮ್ಮನವರೂ ಕಂಡಿದ್ದಾರೆ, ರಾಜೂಗೌಡರೂ ನೋಡಿದ್ದಾರೆ. ಒಂದು ಕಡೆ ಅಲ್ಲ, ಮೂರು ನಾಲ್ಕು ಕಡೆ ನೋಡಿದ್ದಾರೆ. ಇವತ್ತು ರೈತರ ಪರಿಸ್ಥಿತಿ ಹೀಗಿದೆ. ಆದರೆ ರೈತರೇ ಆದಂಥ ಒಂದು ಸಂಸ್ಥೆ ಹಾಳಾಗಿಹೋಗಿದೆ. ಇವತ್ತು ಹಳೇ ಕಾಲದ ಅಂಕಿಅಂಶಗಳನ್ನು ಏತಕ್ಕೆ ಹೇಳುವುಕ್ಕೆ ಹೋಗುತ್ತೀರಿ? ಚೆನ್ನಾಗಿದ್ದಂಥ ಕಾಲದ ಅಂಕಿಅಂಶಗಳನ್ನು ಹೇಳುವುದಕ್ಕೆ ಬರಬೇಡಿ. ಹೋದ ತಿಂಗಳು ಅದಕ್ಕಿಂತ ಹಿಂದಿನ ತಿಂಗಳ ಅಂಕಿಅಂಶಗಳು ನಿಮ್ಮ ಹತ್ತಿರ ಇದ್ದರೆ ದಯವಿಟ್ಟು ಕೊಡಿ.

ಶ್ರೀ ಎಂ.ಎಸ್ . ಆತ್ಮಾನಂದ : ನಾನು ಕೊಡುತ್ತಾ ಇರತಕ್ಕದ್ದು....

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ, ಅವರಿಗೆ ಪ್ರತಿಯೊಂದೂ ಕೂಡ ಗೊತ್ತಿದೆ. ಆದರೆ ಏತಕ್ಕ ಬಚ್ಚಿಡುತ್ತಾರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಸದಸ್ಯರು ನನಗೆ ಹೇಳುವುದಕ್ಕೆ ಅವಕಾಶ ಕೊಡಬೇಕು. ಈ ಸಾರಿ ಕೊಂಡಿರತಕ್ಕದ್ದು 8700.42 ಟನ್ ಹಣ್ಣು. 10 ತಿಂಗಳಲ್ಲಿ 11806 ಟನ್‌ನಷ್ಟು ತರಕಾರಿ ಕೊಂಡಿರತಕ್ಕದ್ದು. ಮಾರುಕಟ್ಟೆಯಿಂದ ಹೋದಸಾರಿಗಿಂತ ಈ ಸಾರಿ ಬಹಳ ಕಡಿಮೆ ಕೊಂಡುಕೊಂಡಿದ್ದೇವೆ. ಹತ್ತು ತಿಂಗಳಲ್ಲಿ ಸುಮಾರು 738.78 ಟನ್ ಹಣ್ಣನ್ನು, 1940 ಟನ್ ತರಕಾರಿಗಳನನ್ನು ಕೊಂಡುಕೊಂಡಿದ್ದೇವೆ. ಮಾರುಕಟ್ಟೆಯಲ್ಲಿ ಕೊಂಡುಕೊಳ್ಳತಕ್ಕ ಹಣ್ಣು ಮತ್ತು ತರಕಾರಿ ಸೂಸೈಟಿಯಿಂದ ಫ್ಯಾಕ್ಟರಿ ಸಪ್ಲೈಸ್ ಗೋಸ್ಕರ ಇದು ಇನ್ನೂ ಕೂಡ ಹೆಚ್ಚಿನ ಪರಿಣಾಮಕಾರಿಯಾಗಿ ನಡೆಯಬೇಕು ಎಂಬುದು ಸದಸ್ಯರ ಆಶಯ. ಸದಸ್ಯರ ಸಲಹೆಳಿದ್ದರೆ ಅದನ್ನು ನಾನು ತೆಗೆದುಕೊಂಡು ಅದರಂತೆ ತೃಪ್ತಿಕರವಾಗಿ ಕಾರ್ಯಾಚರಣೆ ಮಾಡುತ್ತೇನೆ. ಸ್ವಾಮಿ.

ಶ್ರೀ ಸಿ.ಬೈರೇಗೌಡ : ಸದನದ ಚಿಕ್ಕ ಸಮಿತಿ ರಚನೆ ಮಾಡಲಿ ಆಗ ಏನಿದೆ ಎಂಬುದು ಗೊತ್ತಾಗುತ್ತದೆ. ಈ ಸದನದ ಸಮಿತಿ ಮಾಡುವುದಕ್ಕೆ ತಯಾರಿದ್ದೀರಾ? ವಿವರವಾದ ತನಿಖೆ ನಡೆಸಿ ವರದಿ ಕೊಡುವುದಕ್ಕೆ ಸರ್ಕಾರ ತಯಾರಿದೆಯೆ?

ಪ್ರೊ|| ಎಂ.ಡಿ.ನಂಜುಂಡಸ್ವಾಮಿ : ಹಾಪ್‌ಕಾಂಸ್ (Hopcoms) ಬಗ್ಗೆ ನಾವು ಇನ್ನೂ ಬಹಳ ಆಸೆ ಇಟ್ಟು ಕೊಂಡಿದ್ದೇವೆ. ಕಾರಣ ಇಷ್ಟೆ ಒಟ್ಟು ರೈತರು ಏನು ಉತ್ಪಾದನೆ ಮಾಡುತ್ತಾರೆ ಆ ಉತ್ಪಾದನೆಗಳು ಮಾರ್ಕೆಟ್ಟಿನ ಆಶಿಸ್ತಿನಲ್ಲಿ ಸಿಕ್ಕ ನಾವು ಬಹಳ ತೊಂದರೆ ಅನುಭವಿಸುತ್ತಿದ್ದೇವೆ. ಅದರಲ್ಲೂ ವಿಶೇಷವಾಗಿ ಹಣ್ಣುಗಳು ಮತ್ತು ತರಕಾರಿಗಳು

ಬಿಕಾಸ್ ದೇ ಆರ್ ಪೆರಿಷಬಲ್. ಆ ಕಾರಣ ಸನ್ಮಾನ್ಯ ಮಂತ್ರಿಯವರನ್ನು ಈ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಹಳೇ ಆಶಿಸ್ತುಗಳು ಹಾಪ್‌ಕಾಮ್ಸ್ ಒಳಗೆ ಪ್ರವೇಶ ಮಾಡದೇ ಇರುವ ರೀತಿ ಎಚ್ಚರಿಕೆ ವಹಿಸಬೇಕು, ಮತ್ತೆ ಈ ಸಂದರ್ಭ ಉಪಯೋಗಿಸುವುದಕ್ಕೆ ತಾವು ಅವಕಾಶ ಕೊಟ್ಟರೆ ಒಂದು ವಿಷಯ ಹೇಳುತ್ತೇನೆ. ನಮ್ಮ ತೋಟಗಾರಿಕೆ ಮಂತ್ರಿಗಳು ಮತ್ತು ನಮ್ಮ ರಾಮಲಿಂಗರೆಡ್ಡಿಯವರು ಒಂದು ವಿಷಯವನ್ನು ಏಕೆ ಮರೆತರೋ ಗೊತ್ತಿಲ್ಲ. ತೋಟಗಾರಿಕೆಯಲ್ಲಿ ಬಹಳ ಮುಖ್ಯ ಬೆಳೆ ಒಂದಿದ್ದು ಅದರ ತಳಿನೇ ಹಾಳಾಗುವ ಪರಿಸ್ಥಿತಿ ಬಂದಿದೆ. ಅದು ವೀಳ್ಯೆದೆಲೆ. ನಮ್ಮ ರಾಮನಗರ, ಕನಕಪುರ, ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾವ ಮಟ್ಟದಲ್ಲಿ ಡಳ್ಳಿಗಳಿಂದ ವೀಳ್ಯೆದೆಲೆ ಖರೀದಿಯಾಗುತ್ತದೆಂದರೆ, ಒಂದು ಕಟ್ಟು ಎಲೆಗೆ 2ರಿಂದ 5 ರೂಪಾಯಿ ಆಗುತ್ತದೆ. ಇದರ ಬೆಲೆ ಏನು ಹೆಚ್ಚು ಆಗಬೇಕು ಅದು ಆಗುತ್ತಿಲ್ಲ. ಒಂದು ಎಲೆಯೂ ಕೂಡ ಉಳಿಯುತ್ತಿಲ್ಲ. ಆದರೆ ಅದರ ಖರೀದಿ ಬೆಲೆ ಮಾತ್ರ 3 ರಿಂದ 5 ರೂಪಾಯಿಗಳು. ಈ ಹಾಪ್‌ಕಾಮ್ಸ್, ವ್ಯಾಪ್ತಿಗೆ ಈ ವೀಳ್ಯೆದೆಲೆಯನ್ನು ಸೇರಿಸದೇ ಹೋದರೆ ಇನ್ನು ಸ್ವಲ್ಪ ದಿನಗಳಲ್ಲಿ ಈ ಬಳ್ಳಿಗಳು ಒಂದು ಇರುವುದಿಲ್ಲ. ಈ ಕಾರಣದಿಂದ ಇದನ್ನು ಯೋಚಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಜಿಲ್ಲೆಯ ರೈತರು ಈ ಸೊಸೈಟಿಗಳನ್ನು ಕಳೆದ 7-8 ವರ್ಷಗಳಿಂದ ಅವಲಂಬಿಸಿದ್ದಾರೆ. ಇವುಗಳಲ್ಲಿ ಅವ್ಯವಹಾರ ನಡೆದು ಕಳೆದ ೨ ವರ್ಷಗಳಿಂದ ಅಲ್ಲಿ ಅವ್ಯವಸ್ಥೆ ಇದೆ. ಇದಕ್ಕೆ ಮಾನ್ಯ ಮಂತ್ರಿಗಳು ಜವಾಬ್ದಾರರು ಎಂದು ನಾನು ಹೇಳುವುದಿಲ್ಲ, ಇದಕ್ಕೂ ಅವರಿಗೂ ಸಂಬಂಧ ಇಲ್ಲ. ನನ್ನ ಒತ್ತಾಯ ಏನೆಂದರೆ, ಕಂಪ್ಲೇಂಟ್ ಬಂದ ಮೇಲೆ ನೀವು ನಿರ್ದೇಶಕರಿಗೆ ವಿಚಾರಣೆ

ಮಾಡುವುದಕ್ಕೆ ಕೊಟ್ಟಿದ್ದೀರಿ. ಅದರ ವರದಿ ಬರುವುದಕ್ಕೆ ಇನ್ನೂ ಒಂದು ವರ್ಷ ಆಗುತ್ತದೆ. ಅಲ್ಲಿಯವರೆಗೆ ರೈತರು ಎಲ್ಲಿಗೆ ಹೋಗಬೇಕು. ಇದರಿಂದ ರೈತರಿಗ ಭಯ ಬರುತ್ತಿದೆ. ಈಗ ತಮಗೆ ಪ್ರೈಮಾಫೇಸ್ ಅವ್ಯವಹಾರ ನಡೆದಿದೆ ಎಂದು ಗೊತ್ತಾಗಿದೆ. ಅದನ್ನು ಸರಿ ಮಾಡುವುದಕ್ಕೆ ಇನ್ನು 15 ದಿವಸಗಳಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ?

ಶ್ರೀ ಎಂ. ಎಸ್. ಆತ್ಮಾನಂದ: ಈ ವಿಚಾರದ ಬಗ್ಗೆ ಆಸಕ್ತಿ ಇರತಕ್ಕ ಮಾನ್ಯ ಸದಸ್ಯರುಗಳ ಸಭೆ ಒಂದನ್ನು ನಾನು ಕರೆದು ಅವರ ಅಭಿಪ್ರಾಯಗಳನ್ನು ಪಡೆದು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮೀನುಗಾರರಿಗೆ ಡೀಸೆಲ್ ಸಹಾಯಧನ

450 - ಶ್ರೀ ಸಾದತ್ ಆಲಿಖಾನ್ (ಚೆನ್ನಪಟ್ಟಣ): ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಮೀನುಗಾರರಿಗೆ ನೀಡಲಾದ ಡೀಸೆಲ್ ಎಣ್ಣೆಯ ಮೇಲಿನ ಸಹಾಯಧನದ ಒಟ್ಟು ಮೊತ್ತ?*

ಆ) *ಮೀನುಗಾರರಿಗೆ ಪಾವತಿ ಮಾಡಬೇಕಾಗಿರುವ ಡೀಸೆಲ್ ಸಹಾಯಧನದ ಮೊತ್ತ?*

ಇ) *ಈ ಬಾಕಿ ಮೊತ್ತವನ್ನು ಪಾವತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳು?*

ಶ್ರೀ ಎ.ಎಂ. ಬೆಳ್ಳಿಯಪ್ಪ (ಮೀನುಗಾರಿಕೆ,ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು):

ಅ) 1985-86ರಿಂದ 1990-91ರವರೆಗೆ ರಾಜ್ಯದಲ್ಲಿ ಮೀನುಗಾರರಿಗೆ ಒಟ್ಟು 180.78 ಲಕ್ಷ ರೂಪಾಯಿಗಳ ಸಹಾಯ ಧನವನ್ನು ಮಂಜೂರು ನೀಡಲಾಗಿದೆ.

ಆ) ಇತ್ಯರ್ಥವಾಗದ ಹಳೆಯ ಕ್ಲೇಮುಗಳ ಒಟ್ಟು 8.58 ಲಕ್ಷ ರೂಪಾಯಿಗಳ ಡೀಸೆಲ್ ಸಹಾಯ ಧನವನ್ನು ಮೀನುಗಾರರಿಗೆ ಅವರುಗಳ ಬೇಡಿಕೆಗಳು ಸಮಂಜಸವಾದಲ್ಲಿ ಪಾವತಿ ಮಾಡಬೇಕಾಗಿರುತ್ತದೆ.

ಇ) ಈ ಹಳೆಯ ಬೇಡಿಕೆಗಳ ಸತ್ಯಾಂಶವನ್ನು ಕಂಡುಹಿಡಿಯಲು ಸಂಬಂಧಪಟ್ಟ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದ್ದು ವರದಿಗಾಗಿ ಕಾಯಲಾಗಿದೆ.

ಶ್ರೀ ಸಾದತ್ ಆಲಿ ಖಾನ್ : ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ 180.78 ಲಕ್ಷ ಸಹಾಯಧನ ಎಂದು ಹೇಳಿದ್ದಾರೆ. ಇದು 6 ವರ್ಷಕ್ಕೆ ಸುಮಾರು 30.13 ಲಕ್ಷ ರೂಪಾಯಿ ಬರುತ್ತದೆ. ಹಾಗೆಯೇ ಎರಡನೇ ಪ್ರಶ್ನೆಗೆ 8.58 ಲಕ್ಷ ರೂಪಾಯಿ ಪೆಂಡಿಂಗ್ ಇದೆ ಎಂದು ಹೇಳಿದ್ದಾರೆ. ಈ 8.58 ಲಕ್ಷ ರೂಪಾಯಿ ಪೆಂಡಿಂಗ್ ಇರುವುದು ಯಾವ ವರ್ಷದ್ದು? ಇದನ್ನು ಯಾವಾಗ ಕೊಡುತ್ತೀರಿ?

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೇ, ಪೆಂಡಿಂಗ್ ಬಿಲ್ಸ್ 8.5 ಲಕ್ಷ has been there since sometime. ಆ ಕ್ಲೈಮ್ಸ್ ಸೆಟಲ್ ಆಗಿಲ್ಲ. ಕಾರಣ ಏನೆಂದರೆ, ಅಪ್ಲಿಕೇಷನ್ಸ್ ಸರಿಯಿಲ್ಲದೇ ಇರುವುದರಿಂದ, ಮತ್ತು ನಿಯಮಾವಳಿ, ಕಾನೂನು ಪ್ರಕಾರ ಸರಿಯಿಲ್ಲದೇ ಇರುವುದರಿಂದ ಪೆಂಡಿಂಗ್ ಇರುತ್ತವೆ. ನಿಯಮಾವಳಿ